## ಅವಿರತ ಮಾವಿನಕುಳಿ

ಕಲೆ: ಡಿ.ಕೆ. ರಮೇಶ್

**ಲೈಟ್ ಹಾಕುತ್ತಿದ್ದಂತೆ ಹಲ್ಲಿಯೊಂದು ಸರ್ರನೆ ಅಲ್ಲೇ ಸಂದಿಯೊಳಗೆ ನುಸುಳಿಬಿಟ್ಟಿತು. ರಾಜೇಶನ ಮೈ ತಣ್ಣಗಾಗಿ ಹೋಯಿತು. ಆವತ್ತು ರಾತ್ರಿ ಅವನು 'ದರಿದ್ರ ಹಲ್ಲೀ...' ಎಂದು ಕೂಗಿ ಮಲಗಿಕೊಂಡ...**

ಚರ್ರ್... ಚರಪರಪಚರ... ಚರ್ರ್ ಅಂತ ಅಡಿಗೆಮನೆಯಿಂದ ಸದ್ದು ಬಂದಂತಾಯಿತು. ಇನ್‌ಸ್ಟಾಗ್ರಾಮ್‌ನಲ್ಲಿ ಕಾಲೇಜು ಗೆಳತಿಯೊಬ್ಬಳ ಫೋಟೋಗೆ ಬಂದ ಕಾಮೆಂಟುಗಳನ್ನು ಓದುತ್ತಾ ಅನ್ಯಮನಸ್ಕನಾಗಿದ್ದ ರಾಜೇಶ ಚರ್ರ್‌ಪರ್ರ್ ಸದ್ದು ಕೇಳಿ ಬೆಚ್ಚಿದ. ಓ, ಹಲ್ಲಿ ಅಡಿಗೆಮನೆಯಲ್ಲಿ ಪ್ಲಾಸ್ಟಿಕ್ ಕವರುಗಳ ಮೇಲೆಲ್ಲಾ ಓಡಾಡ್ತಿದೆ! ಹಾಳು ಹಲ್ಲಿ. ಅಥವಾ ಎರಡು ಮೂರು ಹಲ್ಲಿಗಳಿರಬಹುದು. ರಾಜೇಶನಿಗೆ ಮೈತುಂಬಾ ಮುಳ್ಳು ಚುಚ್ಚಿದಂತಾಯಿತು. ಹಾಳು ದರಿದ್ರ ಹಲ್ಲಿ ಅಂತ ಚೀರಿಬಿಡೋಣ ಅನ್ನಿಸಿತು. ಚೀರಬಹುದಲ್ಲ, ಇಷ್ಟಕ್ಕೂ ಮನೆಯಲ್ಲಿರೋದು ತಾನೊಬ್ಬನೇ ಅಲ್ಲವೇ. "ಥೂ ದರಿದ್ರ ಹಲ್ಲೀ!!..." ಅಂತ ಜೋರಾಗಿ ಒಮ್ಮೆ ಕೂಗಿದ. ಮರುಕ್ಷಣ ತನ್ನ ಕೂಗಿನ ನಿರರ್ಥಕತೆಯ ಬಗ್ಗೆ ನಾಚಿಕೆಯಾಯಿತು. ಅಡಿಗೆಮನೆ ಮರೆತುಹೋಗುವಂತೆ ರೂಮಿನ ಬಾಗಿಲು ಗಟ್ಟಿಯಾಗಿ ಮುಚ್ಚಿ ಲೈಟ್ ಆಫ್ ಮಾಡಿ ಮಲಗಿ ಮತ್ತೆ ಇನ್‌ಸ್ಟಾಗ್ರಾಮ್‌ನೊಳಗೆ ಮುಳುಗಿದ. ಆಮೇಲೆ ಮರೆಯಬಹುದು ಅಥವಾ ನಿದ್ದೆ ಬಂದುಬಿಡಬಹುದೆಂದು ವಾಟ್ಸ್‌ಆ್ಯಪ್‌ನಲ್ಲಿ ಅಪ್ಪನನ್ನು ಹುಡುಕಿ ಗುಡ್‌ನೈಟ್ ಮೆಸೇಜು ಮಾಡಿದ.

ಇಷ್ಟಕ್ಕೂ ಲಾಕ್‌ಡೌನ್ ಘೋಷಣೆಯಾದಾಗ ಆತಂಕಕ್ಕೊಳಗಾಗದೆ ಸ್ವಾಗತಿಸಿದ ಕೆಲವೇ ಜನರಲ್ಲಿ ರಾಜೇಶನೂ ಒಬ್ಬ. ದಿನವೂ ಕೆನರಾ ಬ್ಯಾಂಕಿನಲ್ಲಿ ನೂರಾರು ಜನರನ್ನು ನೋಡುತ್ತಾ ರೋಸಿಹೋಗಿದ್ದ. ಅವನು ಬ್ರಾಂಚಿನೊಳಗೆ ಸಾಲಗಳನ್ನು ನಿರ್ವಹಿಸುವ ಪೋಸ್ಟಿನಲ್ಲಿದ್ದು ಜನರನ್ನು ಯಾವಾಗಲೂ ಎದುರಾಗಬೇಕಿರಲಿಲ್ಲ. ಆದರೆ, ಸದಾ ಸುತ್ತಲಿನ ಗಿಜಿಗಿಜಿ, ಆಗಾಗ ಕೆಟ್ಟುನಿಲ್ಲುವ ಏಸಿ, ಎಂದಿಗೂ ಮುಗಿಯದ ಫೈಲುಗಳ ಬೆಟ್ಟ, ಕುತ್ತಿಗೆಯಿಂದ ಬೆನ್ನಿಗೆ ಹರಿಯುತ್ತಾ ಚಿತ್ತವನ್ನೆಲ್ಲಾ ತನ್ನೆಡೆ ಸೆಳೆಯುವ ಸಣ್ಣ ಬೆವರಹನಿ, ಫೋನ್ ರಿಂಗಣದ ನಿಲ್ಲದ ಹಿನ್ನೆಲೆ ಸಂಗೀತ ಮತ್ತು ಇವೆಲ್ಲದರಿಂದ ತಾನು ವಿಚಲಿತನಾಗದೆ ಪಟಪಟನೆ ಕೆಲಸ ಮುಗಿಸಬೇಕೆಂದು ನಿರೀಕ್ಷಿಸುವ ಸಿಬ್ಬಂದಿ ಪಡೆ. ಅಷ್ಟಲ್ಲದೆ ಆ ಪೋಸ್ಟಿಗೆ ಬಂದು ನಾಲ್ಕು ತಿಂಗಳಷ್ಟೇ ಆಗಿದ್ದರಿಂದ ಸಂದೇಹಗಳು ಹೆಚ್ಚಾಗಿ ಎದುರಾಗುತ್ತಿದ್ದು, ಹೊಸಬನೆಂಬ ರಿಯಾಯಿತಿಯೂ ದೊರಕದಾಗಿತ್ತು. ಪ್ರಮೋಷನ್ ಆಗುವ ಮೊದಲು ಬೆಂಗಳೂರಿನ ಬ್ರಾಂಚಿನಲ್ಲಿ ಕ್ಯಾಷ್ ಕೌಂಟರ್‌ನಲ್ಲಿ ಇದ್ದದ್ದೇ ಚೆನ್ನಿತ್ತು ಎಂದು ಸುಮಾರು ಸಲ ಅನ್ನಿಸಿದ್ದಿದೆ. ಯಾಕಾದರೂ ಪ್ರಮೋಷನ್ ಆಯ್ಕೆ ಮಾಡಿಕೊಂಡು ಟ್ರಾನ್ಸ್‌ಫರ್ ತಗೊಂಡು ಈ ಮುಂಬಯಿಗೆ ಬಂದೆನಪ್ಪಾ ಎಂದು ಹಳಹಳಿಸಿದ್ದಿದೆ.

ಹೀಗಾಗಿಯೇ ಲಾಕ್‌ಡೌನ್‌ನಿಂದಾಗಿ ಬ್ಯಾಂಕಿನಲ್ಲೂ ರಸ್ತೆಗಳಲ್ಲೂ ಜನಸಂದಣಿ ಕಮ್ಮಿಯಾಗಿ ತನ್ನ ಹೊಸಜೀವನದ ನಿಬಿಡತೆ ಕಡಿಮೆಯಾಗಬಹುದೇನೋ ಎಂದು ರಾಜೇಶ ಆಶಿಸಿದ್ದ. ಅವನು